

ಪುಷ್ಕರಣಿ ಮತ್ತು ಚಿಕ್ಕ ಬೆಟ್ಟ



'ಕಟವಪ್ರ ಎಂಬ ಬೆಟ್ಟಪ್ರದೇಶದಲ್ಲಿರುವ ಕಂದುಬಣ್ಣದ ದೊಡ್ಡ ಬಂಡೆಗಳು ಕಪ್ಪುಮೋಡಗಳಂತೆ ಶೋಭಿಸುತ್ತವೆ. ಈ ಪ್ರದೇಶದ ತುಂಬೆಲ್ಲ ಸಮೃದ್ಧವಾದ ಹೂಹಣ್ಣುಗಳಿಂದ ಇಡಿಕಿರಿದ ವೃಕ್ಷಗಳು ಕಂಡುಬರುತ್ತವೆ. ಎರಡು ಬೆಟ್ಟಗಳೆಡೆಯ ಕಣಿವೆ ಹಳ್ಳಕೊಳ್ಳಗಳಿಂದ ದುರ್ಗಮವಾಗಿದೆ. ಇಲ್ಲಿನ ದಟ್ಟಕಾಡು ಆನೆ, ಹಂದಿ, ಜಿಂಕೆ, ಚಿರತೆ, ಹುಲಿಗಳಿಂದ ತುಂಬಿದೆ.'

—ಇದೊಂದು ಶಾಸನ ಬರಹ. ಕ್ರಿ.ಶ. 600ರಲ್ಲಿ ರಚಿತವಾದ ಸಂಸ್ಕೃತ ಶಾಸನ. ಇಲ್ಲಿ ಹೆಸರಿಸಿರುವ ಕಟವಪ್ರವು ಕಳ್ವಪ್ಪು ಎಂಬ ಕನ್ನಡದ ಹೆಸರಿನ ಸಂಸ್ಕೃತರೂಪ. ಇದೇ ಈಗಿನ ಶ್ರವಣಬೆಳಗೊಳದ ಚಿಕ್ಕಬೆಟ್ಟ. ಈಗ ನಾವು ಚಂದ್ರಗಿರಿಯೆಂದು ಕರೆಯುವ ಚಿಕ್ಕಬೆಟ್ಟವು ಕಪ್ಪು ಬಂಡೆಗಳಿಂದಲೂ ಗುಹೆಗಳಿಂದಲೂ ಕೂಡಿ ಕಳ್ವಪ್ಪು ಎಂಬ ಹೆಸರು ಪಡೆದಿತ್ತು. ಇಂಥ ಕಪ್ಪುಬೆಟ್ಟವು ಮುಂದಿನ ಶತಮಾನಗಳಲ್ಲಿ ಸಾವಿರಾರು ಜೈನಮುನಿಗಳ ತಪಸ್ಸಿನ ತಾಣವಾಗಿ ಪವಿತ್ರಕ್ಷೇತ್ರವಾಗಿ ಪರಿವರ್ತನೆ ಹೊಂದಿದ್ದು ಹೇಗೆ?

'ಇದಕ್ಕೆಲ್ಲ ಕಾರಣಪುರುಷ ಭದ್ರಬಾಹು ಎಂಬ ಮುನಿ. ತನ್ನ ಕಾಲದ (ಕ್ರಿ.ಶ. ಮೂರನೆಯ ಶತಮಾನ) ಶ್ರೇಷ್ಠ ಜ್ಞಾನಿಯೂ ಶಾಸ್ತ್ರಪಾರಂಗತನೂ ಆದ ಭದ್ರಬಾಹು ಭಟಾರರು ಚಂದ್ರಗುಪ್ತ ಮೌರ್ಯನ ವಂಶಜ ದೊರೆಯಾದ ಚಂದ್ರಗುಪ್ತನ ಗುರು. ಉತ್ತರ ದೇಶದಲ್ಲಿ ಹನ್ನೆರಡು ವರ್ಷಗಳ ಭೀಕರಕ್ಷಾಮ ಆವರಿಸಿದಾಗ ದಕ್ಷಿಣದತ್ತ ತಮ್ಮ ಶಿಷ್ಯರೊಡನೆ ಭದ್ರಬಾಹು ಹೊರಟ ಸಂದರ್ಭದಲ್ಲಿ ಚಂದ್ರಗುಪ್ತನೂ ರಾಜ್ಯತ್ಯಾಗ ಮಾಡಿ ಸನ್ಯಾಸ ಸ್ವೀಕರಿಸಿ, ಗುರುಗಳೊಡನೆ ಹೊರಟುಬಿಟ್ಟ. ಕಟವಪ್ರ ಅಥವಾ ಕಳ್ವಪ್ಪು ಬೆಟ್ಟಕ್ಕೆ ಬಂದು ತಂಗಿದ ಭದ್ರಬಾಹುಮುನಿ ಅಲ್ಲಿಯೇ ತಮ್ಮ ಉಳಿದ ಆಯುಷ್ಯ ಕಳೆಯಲು ನಿರ್ಧರಿಸಿದರಂತೆ. ತನ್ನ ಆಯುಷ್ಯ ತೀರುತ್ತಿರುವುದನ್ನು ಅರಿತ ಭದ್ರಬಾಹುಮುನಿಯು ಹಿರಿಯ ಶಿಷ್ಯನೊಬ್ಬನಿಗೆ ಸಮುದಾಯದ ನೇತೃತ್ವವನ್ನು ವಹಿಸಿಕೊಟ್ಟು ಮುಂದಕ್ಕೆ ಕಳುಹಿಸಿಕೊಟ್ಟರೆ, ಚಂದ್ರಗುಪ್ತನು ಭದ್ರಬಾಹುವಿನೊಡನೆ ಬೆಟ್ಟದಲ್ಲಿಯೇ ಉಳಿದು ಗುರುವಿನ ಪರಿಚರ್ಯೆಯಲ್ಲಿ ತೊಡಗಿಕೊಂಡಿದ್ದ.'

'ಚಿಕ್ಕಬೆಟ್ಟದ ಶಿಲೆಯೊಂದರ ಮೇಲೆ ಕಠಿಣತಪಸ್ಸಿಗೆ ತೊಡಗಿದ ಭದ್ರಬಾಹು ಭಟಾರರು ಹಸಿವನ್ನು ಸೈರಿಸಿ ದೇಹವನ್ನು ತೊರೆದರು. ಗುರುಸಮಾಧಿಯ ಬಳಿಯಲ್ಲೇ ಪೂಜೆ ಸಲ್ಲಿಸುತ್ತ ಉಳಿದ ಚಂದ್ರಗುಪ್ತ ಮುಂದಿನ ಹನ್ನೆರಡು ವರುಷಗಳ ಕಾಲ ಕಠಿಣ ತಪಶ್ಚರ್ಯೆಯಲ್ಲಿ ತೊಡಗಿ ಅಲ್ಲಿಯೇ ಪ್ರಾಣತ್ಯಾಗ ಮಾಡಿದ. ಹೀಗೆ ಕ್ರಿಸ್ತಶಕ ಮೂರನೆಯ ಶತಮಾನದಲ್ಲಿ ಭದ್ರಬಾಹು– ಚಂದ್ರಗುಪ್ತರು ಕಳ್ವಪ್ಪಿನಲ್ಲಿ ತಪಸ್ಸುಮಾಡಿ, ಸಮಾಧಿಮರಣ ಪಡೆದ ಮೇಲೆ ಈ ಪ್ರದೇಶವು ಪ್ರಸಿದ್ಧಿ ಪಡೆಯಿತು.'